ಇ) ರಾಜ್ಯದ ಪ್ರತಿ ವಿಧಾನಸಭಾ ಕ್ಷೇತ್ರದ ಶಾಸಕರ ನಿಧಿಗೆ ಬಿಡುಗಡೆಗೊಂಡಿರುವ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್.ಆರ್. ಪಾಟೀಲ್ (ಮಾನ್ಯ ಯೋಜನೆ ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರು)

ಅ) ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಪ್ರತಿ ವಿಧಾನ ಸಭಾ/ವಿಧಾನ ಪರಿಷತ್ ಕ್ಷೇತ್ರಗಳಿಗೆ ತಲಾ ₹ 97.00 ಲಕ್ಷಗಳನ್ನು ಈವರೆಗೆ ಬಿಡುಗಡೆಗೊಳಿಸಲಾಗಿದೆ.

ಆ) ಕ್ಷೇತ್ರ ಅಭಿವೃದ್ಧಿ ಹಿತದೃಷ್ಟಿಯಿಂದ 2013–14ನೇ ಆರ್ಥಿಕ ವರ್ಷದಿಂದ ಸದರಿ ಅನುದಾನವನ್ನು ₹ 1.00 ಕೋಟಿಗಳಿಂದ 2.00ಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಿದೆ. ಆದೇಶ ಸಂಖ್ಯೆ: ಯೋಇ 81 ಯೋವಿವಿ 2013. ದಿನಾಂಕ:18.09.2013.

ಇ) 2013– 14ನೇ ಸಾಲಿನ ಆರ್ಥಿಕ ವರ್ಷದಲ್ಲಿ ₹ 97.00 ಲಕ್ಷಗಳನ್ನು ಈವರೆಗೆ ಬಿಡುಗಡೆಗೊಳಿಸಿ ಜಿಲ್ಲಾಧಿಕಾರಿಗಳ ಖಾತೆಗೆ ಜಮಾ ಮಾಡಲಾಗಿದ್ದು, ಬಾಕಿ ಅನುದಾನವನ್ನು ಬಿಡುಗಡೆಗೊಳಿಸಲು ಕ್ರಮ ವಹಿಸಲಾಗುತ್ತಿದೆ.

ಆಸ್ಪತ್ರೆಗಳಿಗೆ ಖರೀದಿಸಲಾದ ಔಷಧಿಗಳು

517(928); ಶ್ರೀ ಮಲ್ಲಿಕಾರ್ಜುನ ಸಿದ್ದರಾಮಪ್ಪ (ಖೂಬಾ) (ಬಸವಕಲ್ಯಾಣ)

ಅ) ರಾಜ್ಯದಲ್ಲಿ ಕಳೆದ 6 ತಿಂಗಳ ಅವಧಿಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಔಷಧಿಗಳ ಖರೀದಿ ಮತ್ತು ವೈದ್ಯಕೀಯ ಉಪಕರಣಗಳ ಖರೀದಿಗಾಗಿ ಸರ್ಕಾರ ವೆಚ್ಚ ಮಾಡಿರುವ ಹಣವೆಷ್ಟು;

ಆ) ಇಲಾಖೆಗೆ ಔಷದಿಗಳ ಮತ್ತು ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡಿರುವ ಸಂಸ್ಥೆಗಳು ಮತ್ತು ವ್ಯಕ್ತಿಗಳ ಹೆಸರು ವಿಳಾಸಗಳ ಮಾಹಿತಿ ಹಾಗೂ ಈ ಸರಬರಾಜಿಗೂ ಮುನ್ನ ಅನುಸರಿಸಿದ ನೀತಿ ನಿಯಮಗಳೇನು;

ಇ) ಇದೇ ಅವಧಿಯಲ್ಲಿ ಬೀದರ್ ಜಿಲ್ಲೆಯ ವಿವಿಧ ಆಸ್ಪತ್ರೆಗಳಿಗೆ ಎಷ್ಟು ಮೊತ್ತದ ಔಷಧಿಗಳು ಮತ್ತು ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡಲಾಗಿದೆ ಇದಕ್ಕೆ ತಗುಲಿದೆ ವೆಚ್ಚವೆಷ್ಟು?

ಶ್ರೀ ಯು.ಟಿ. ಖಾದರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) 2013–14ನೇ ಸಾಲಿನ ಆರ್ಥಿಕ ವರ್ಷದಲ್ಲಿ ಇಲ್ಲಿಯವರೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಖರೀದಿಸಿರುವ ಔಷಧಿಗಳ ಖರೀದಿಗೆ ಮಾಡಿರುವ ವೆಚ್ಚ ₹ 70,94,80,658.00 ಹಾಗೂ ವೈದ್ಯಕೀಯ ಉಪಕರಣಗಳ ಖರೀದಿಗೆ ಮಾಡಿರುವ ವೆಚ್ಚ ₹ 30,65.07,067.00

ಆ)

1. ಔಷಧಿಗಳ ಖರೀದಿ ಮಾಡಿರುವ ಸಂಸ್ಥೆಗಳ ಹೆಸರು ಮತ್ತು ವಿಳಾಸಗಳ ಮಾಹಿತಿ ಅನುಬಂಧ–1 ರಲ್ಲಿ ನೀಡಲಾಗಿದೆ. ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡಿರುವ ಸಂಸ್ಥೆಗಳ ಹೆಸರು ಮತ್ತು ವಿಳಾಸಗಳ ಮಾಹಿತಿ ಅನುಬಂಧ–2ರಲ್ಲಿ ನೀಡಲಾಗಿದೆ.
2. ಕೆ.ಟಿ.ಪಿ.ಪಿ ನಿಯಮಾನುಸಾರ ಖರೀದಿ ಪ್ರಕ್ರಿಯೆ ಕೈಗೊಳ್ಳಲಾಗಿದೆ.
    1. ಬೇಡಿಕೆಪಟ್ಟಿ ಕ್ರೋಢೀಕರಿಸಿ ನೀಡ್ ಆಸೆಸ್‌ಮೆಂಟ್ ಸಮಿತಿಯಲ್ಲಿ ಅನುಮೋದನೆ ಪಡೆಯುವುದು.
    2. ತಾಂತ್ರಿಕ ವೈಶಿಷ್ಟ್ಯತೆ ಸಮಿತಿಯಲ್ಲಿ ತಾಂತ್ರಿಕ ವೈಶಿಷ್ಟ್ಯತೆಯನ್ನು ಅನುಮೋದನೆಯನ್ನು ಪಡೆಯುವುದು.
    3. ಇ– ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸುವುದು.

4. ಕೆ.ಟಿ.ಪಿ.ಪಿ ನಿಯಮಾನುಸಾರ ಟೆಂಡರ್ ಅಂತಿಮಗೊಳಿಸುವುದು.

5. ಇ-ಪೋರ್ಟಲ್‌ನಲ್ಲಿ ಟೆಂಡರ್‌ಗಳ ಬಗ್ಗೆ ಪೂರ್ಣವಾದ ಮಾಹಿತಿ ಲಭ್ಯವಿರುತ್ತದೆ.

ಇ) ಬೀದರ್ ಜಿಲ್ಲೆಯ ವಿವಿಧ ಆಸ್ಪತ್ರೆಗಳಿಗೆ ಸರಬರಾಜು ಮಾಡಿರುವ ಔಷಧಿಗಳು ಮತ್ತು ಉಪಕರಣಗಳ ವೆಚ್ಚ ರೂ.ಗಳಲ್ಲಿ ಈ ಕೆಳಕಂಡಂತಿದೆ.

1) ಸಾರ್ವಜನಿಕ ಆಸ್ಪತ್ರೆ -50904402.05

2) ಸಮುದಾಯ ಆರೋಗ್ಯ ಕೇಂದ್ರ – 3184027.18

3) ಪ್ರಾಥಮಿಕ ಆರೋಗ್ಯ ಕೇಂದ್ರ – 3359527.35

4) ಜಿಲ್ಲಾ ಟಿ.ಬಿ. ಆಸ್ಪತ್ರೆ – 249443.2

5) ಪ್ರಸೂತಿ ಕೇಂದ್ರ – 31867.82

ಮೆಡಿಕಲ್ ಕಾಲೇಜುಗಳಿಗೆ ಖರೀದಿಸಿದ ಔಷಧಿಗಳು

518(929); ಶ್ರೀ ಮಲ್ಲಿಕಾರ್ಜುನ್ ಸಿದ್ದರಾಮಪ್ಪ ಖೂಬಾ

ಅ) ರಾಜ್ಯದಲ್ಲಿ ಕಳೆದ 6 ತಿಂಗಳ ಅವಧಿಯಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ರಾಜ್ಯದ ವಿವಿಧ ಸ್ಥಳಗಳಲ್ಲಿ ಮೆಡಿಕಲ್ ಕಾಲೇಜುಗಳಿಗೆ ಖರೀದಿಸಲಾದ ಔಷಧಿಗಳ ಮತ್ತು ವ್ಯದ್ಯಕೀಯ ಉಪಕರಣಗಳಿಗೆ ಸರ್ಕಾರ ವೆಚ್ಚ ಮಾಡಿರುವ ಹಣವೆಷ್ಟು; (ಮೆಡಿಕಲ್ ಕಾಲೇಜುವಾರು ಅಂಕಿ ಅಂಶಗಳನ್ನು ಒದಗಿಸುವುದು.)

ಆ) ಈ ಮೆಡಿಕಲ್ ಕಾಲೇಜುಗಳಿಗೆ ಔಷಧಿಗಳು ಮತ್ತು ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡಿರುವ ಸಂಸ್ಥೆಗಳಾವುವು; ಹಾಗೂ ಈ ಸರಬರಾಜಿಗೂ ಮುನ್ನ ಅನುಸರಿಸಿದ ನೀತಿ ನಿಯಮಗಳೇನು? (ಸಂಸ್ಥೆಗಳ ಹೆಸರು ಮತ್ತು ವ್ಯಕ್ತಿಗಳ ಹೆಸರು ವಿಳಾಸಗಳ ಮಾಹಿತಿ ನೀಡುವುದು)